೫

ಮೈಲಿಗಲ್ಲುಗಳು ಬಹುಭಾಷಿಕತೆ, ಭಾಷಾ ನೀತಿ ಮತ್ತು ಸಂವಿಧಾನ ರಚನಾ ಸಭೆಯ ಚರ್ಚೆಗಳು

– ಎಸ್ ಇಮ್ತಿಯಾಜ್ ಹಸ್ಸೈನ್

ಸಾರಾಂಶ: ಈ ಲೇಖನವು ಸಂವಿಧಾನ ರಚನಾ ಸಭೆಯಲ್ಲಿ ಭಾಷೆಯನ್ನು ಕುರಿತು ನಡೆದ ಚರ್ಚೆಗಳನ್ನು, ಆನಂತರ ಕೈಗೊಂಡ ಭಾಷಾ ನೀತಿಗಳನ್ನು ವಿವರಿಸುತ್ತದೆ. ಸ್ವತಂತ್ರ ಭಾರತದ ತ್ರಿಭಾಷಾ ನೀತಿಯ ಮೂಲ ಈ ಚರ್ಚೆಯೊಳಗೆ ಅಡಗಿರುವುದನ್ನು ಗುರುತಿಸಬಹುದು. ಹಿಂದಿ ಭಾರತ ಒಕ್ಕೂಟದ ಆಡಳಿತ ಭಾಷೆಯೇ ಹೊರತು ಅದೊಂದೇ ರಾಷ್ಟ್ರೀಯ ಭಾಷೆಯಲ್ಲ ಎಂಬುದನ್ನೂ ಮತ್ತು ಮಗುವಿಗೆ ಅದರ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡಬೇಕೆನ್ನುವುದು ನಮ್ಮ ಸಂವಿಧಾನದ ಆಶಯವಾಗಿರುವುದನ್ನೂ ಕಾಣಬಹುದು.

ಪ್ರಮುಖ ಪದಗಳು: ಭಾಷಾ ನೀತಿ– Language policy, ಅಧಿಘೋಷಣೆ-Proclamation, ಕೇಂದ್ರ ಶೈಕ್ಷಣಿಕ ಸಲಹಾ ಮಂಡಳಿ– Central advisory board of education, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು– National Curriculum Framework (NCF), ಸಂವಿಧಾನ ರಚನಾ ಸಭೆಯ ಚರ್ಚೆಗಳು– Constitutent Assembly Debates.

* * *

ಭಾಷಾ ನೀತಿ ಹಾಗೂ ಬೋಧನೆಯನ್ನು ಕೇಂದ್ರದಲ್ಲಿರಿಸಿಕೊಂಡು, ಭಾರತೀಯ ಭಾಷಾ ವಿಷಯಗಳನ್ನು ಕುರಿತು ಸಂವಿಧಾನ ರಚನಾ ಸಭೆಯಲ್ಲಿ ನಡೆದ ಚರ್ಚೆ ಹಾಗೂ ಭಾರತೀಯ ಸಂವಿಧಾನದಲ್ಲಿರುವ ಭಾಷಾ ಉಪಬಂಧಗಳ (provisions) ಪರಿಣಾಮಗಳನ್ನು ಈ ಕಿರು ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.

ಸಾಂವಿಧಾನಿಕ ಸಭೆಯಲ್ಲಿ ನಡೆದ ಚರ್ಚೆಗಳು ಅಲ್ಲಿ ಪಾಲ್ಗೊಂಡಿದ್ದವರಿಗಿದ್ದ ಉದ್ದೇಶಗಳ ಪರಿಚಯ ನೀಡುತ್ತವೆ. ಈ ಚರ್ಚೆಗಳು ೯ ಡಿಸೆಂಬರ್ ೧೯೪೬ ರಿಂದ ೧೯೪೯ರ ತನಕ ನಡೆದವು. ೨೬ ಜನವರಿ ೧೯೫೦ ರಂದು ಜಾರಿಗೆ ಬಂದ ಭಾರತೀಯ ಸಂವಿಧಾನದ ಅಧಿಘೋಷಣೆಯೊಂದಿಗೆ ಅಂತ್ಯಗೊಂಡವು.

ಭಾಷಾ ವಿಷಯ ಮತ್ತು ಸಂವಿಧಾನ ರಚನಾ ಸಭೆಯ ಚರ್ಚೆಗಳು

ಸಂವಿಧಾನ ರಚನಾ ಸಭೆಯಲ್ಲಿ ಭಾಷೆಯ ವಿಷಯವು ಬಹಳ ಸೂಕ್ಷ್ಮವಾದಂತಹ ಹಾಗೂ ಒಡಕು ಹುಟ್ಟಿಸುವಂತಹ ವಿಷಯವಾಗಿತ್ತು. ಆರಂಭಿಕ ದಿನಗಳಲ್ಲಿ ಸಂವಿಧಾನ ಸಭೆಯ ಸದಸ್ಯರಲ್ಲಿ ಬಣಗಳು ಅಥವಾ ಗುಂಪುಗಾರಿಕೆ ಇರಲಿಲ್ಲ. ಆದರೆ ಭಾಷೆಯ ವಿಷಯ ಬಂದಾಗ ಸಭೆಯು ಸಂಪೂರ್ಣವಾಗಿ ವಿಭಜನೆಗೊಂಡಿತು. ಮೂಲಭೂತ ಹಕ್ಕುಗಳ ರೀತಿಯಲ್ಲಿಯೇ ಭಾಷೆ ಸಹ ಎಲ್ಲರಿಗೂ ಆಪ್ತವಾದ ವಿಷಯವಾಗಿತ್ತು. ಸಾಂವಿಧಾನಿಕ ಸಭೆಯಲ್ಲಿ ನಡೆದ ಚರ್ಚೆಗಳ ಪುಟಗಳನ್ನು ತಿರುವಿದರೆ ಅಲ್ಲಿ ಭಾಷಾ ವಿವಾದಗಳು ಇಡೀ ಮೂರು ವರ್ಷಗಳ ಕಾಲಾವಧಿಯಲ್ಲಿ ಎಲ್ಲರನ್ನೂ ವಿಚಲಿತಗೊಳಿಸಿ ಚಿಂತಿತರನ್ನಾಗಿಸಿದ್ದು ಕಂಡುಬರುತ್ತದೆ. ವಾಸ್ತವವಾಗಿ, ಆರಂಭದಲ್ಲಿಯೇ ಕೆಲವು ಸದಸ್ಯರು ಕೆಲವರಿಗೆ ಮಾತ್ರ ಅರ್ಥವಾಗುವ ಪ್ರಾದೇಶಿಕ ಭಾಷೆಯಲ್ಲಿ ಸಂವಿಧಾನ ಸಭಾ ಚರ್ಚೆಯ (CAD) ಅಧ್ಯಕ್ಷರನ್ನುದ್ದೇಶಿಸಿ ಮಾತನಾಡಿದರು. ಭಾಷೆಯನ್ನು ಅನೇಕರು ಅವರದೇ ಆದ ಅನೇಕ ರೀತಿಗಳಲ್ಲಿ ಅರ್ಥೈಸಿಕೊಂಡಿದ್ದರು: ಕೆಲವರಿಗೆ ಇದು ಪ್ರಾಥಮಿಕ ಶಾಲೆಯಲ್ಲಿ ಮಾತ್ರ ಭಾಷಾ ಬೋಧನೆಯ ವಿಷಯವಾಗಿತ್ತು; ಮತ್ತೆ ಕೆಲವರಿಗೆ ಭಾಷೆಯು ಸಾಮಾಜಿಕ ಸ್ಥಾನಮಾನದ ವಿಷಯವಾಗಿತ್ತು, ಇಂಥವರಿಗೆ ಗಣ್ಯವರ್ಗದವರ ಮಕ್ಕಳು ಕೇಂದ್ರ ಸರ್ಕಾರದ ಸಿವಿಲ್ ಸೇವೆಗಳ ಪರೀಕ್ಷೆಗಳಲ್ಲಿ ಅರ್ಹತೆ ಪಡೆಯಲು ಭಾಷೆ ಒಂದು ಸಾಧನವಾಗಿತ್ತು; ಇನ್ನೂ ಕೆಲವರಿಗೆ ಇದು, ಆಯಾ ಭಾಷಾ ಸಮುದಾಯ ಹಾಗೂ ಧಾರ್ಮಿಕ ಸಮುದಾಯದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಗರಿಮೆಯ ವಿಷಯವಾಗಿತ್ತು; ಮತ್ತಿತರರಿಗೆ ಭಾಷೆಯು ಸಂಬಂಧಗಳ ನಡುವಿನ ಪ್ರಾಬಲ್ಯದ ವಿಷಯವಾಗಿತ್ತು – ಇವರಿಗೆ, ಇದರಲ್ಲಿ ಸ್ಥಳೀಯರಿಗೆ ಹೋಲಿಸಿದರೆ ವಿದೇಶಿಯರು ಮತ್ತು ವಸಾಹತುಗಾರರ ಪ್ರಾಬಲ್ಯ ಕಣ್ಣಿಗೆ ಬಿದ್ದು, ಅದರ ಮೂಲಕ ಅವರ ರಾಷ್ಟ್ರದ ಮೇಲಿನ ಅಭಿಮಾನ ಕೆರಳುತ್ತಿತ್ತು. ಈ ಅಭಿಮಾನವು ರಾಷ್ಟ್ರೀಯ ಭಾಷೆಯ ಪರವಾಗಿ ವಾದ ಮಾಡುವಂತೆ ಹಾಗೂ ಸಂವಿಧಾನದ ಹಿಂದಿ ಅವತರಣಿಕೆ ತರುವಂತೆ ಪ್ರೇರೇಪಿಸಿತು. ಭಾಷೆಯನ್ನು ಕುರಿತ ಪ್ರತಿಯೊಂದು ಗ್ರಹಿಕೆಯೂ ತನ್ನದೇ

ಆದ ತಾತ್ತ್ವಿಕ ಚಿಂತನೆಯನ್ನು ಹುಟ್ಟುಹಾಕುತ್ತಿತ್ತು ಮತ್ತು ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ಸದಸ್ಯರ ಭಾಷಾ ಗ್ರಹಿಕೆಗಳು ಮಹತ್ತ್ವದ ಸ್ಥಾನ ಪಡೆದುಕೊಳ್ಳುತ್ತಿದ್ದವು.

ಈ ಚರ್ಚೆಗಳಲ್ಲಿ ೧೯ನೇ ಶತಮಾನದ ರಮ್ಯ ಸ್ವ-ಜನಾಂಗಾಭಿಮಾನಿಯಾಗಿ ರಾಷ್ಟ್ರೀಯತೆ ಇದ್ದರೂ, ದೇಶ ವಿಭಜನೆಯ ಆಘಾತ ಹಾಗೂ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಡೆಯುತ್ತಿದ್ದ ಧಾರ್ಮಿಕ-ರಾಷ್ಟ್ರೀಯವಾದಿ ವಿಚಾರಗಳಲ್ಲಿ ಏಕೈಕ ರಾಷ್ಟ್ರಭಾಷೆಯ ಕಲ್ಪನೆ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಹಾಗಿದ್ದರೂ, ಸಂವಿಧಾನ ರಚನಾ ಸಭೆಯು ಯಾವುದೇ ಒಂದು ಭಾರತೀಯ ಭಾಷೆಗೆ ಆದ್ಯತೆ ನೀಡದೆ ಸಂಭವನೀಯ ಭಾಷಾ ವಿವಾದಗಳಿಂದ ದೂರ ಉಳಿಯಿತು. ಸಭೆಯ ಸದಸ್ಯರಿಗೆ ಭಾಷಾ ಕಾರ್ಯದಲ್ಲಿದ್ದ ಅಸಾಧ್ಯತೆಗಳ ಅರಿವಿತ್ತು ಹಾಗೂ ಅವರು ಅಸಾಧ್ಯವಾದದ್ದಕ್ಕೆ ಪ್ರಯತ್ನ ಮಾಡಲಿಲ್ಲ. ಹಾಗಾಗಿ ಅತ್ಯಂತ ಮೇಧಾವಿತನದಿಂದ ಹಿಂದಿಯನ್ನು ಒಕ್ಕೂಟ ರಾಷ್ಟ್ರದ ಅಧಿಕೃತ ಭಾಷೆ (ರಾಷ್ಟ್ರೀಯ ಭಾಷೆ ಎಂದಲ್ಲ) ಎಂದು ಘೋಷಿಸಿಲಾಯಿತು. ಪ್ರಾಂತ್ಯಗಳ ನಡುವಿನ ಸಂವಹನಕ್ಕೆ ಹಿಂದಿ ಬಳಕೆಯಾಗುತ್ತದೆ ಹಾಗೂ ಮೊದಲ ಹದಿನೈದು ವರ್ಷಗಳ ಕಾಲಾವಧಿಯಲ್ಲಿ ಇಂಗ್ಲಿಷ್ ಅಧಿಕೃತ ಸಹಾಯಕ ಭಾಷೆಯಾಗಿರುತ್ತದೆ ಎನ್ನುವ ಭರವಸೆ ನೀಡಿದರು.

ಚರ್ಚೆಯಲ್ಲಿ ಗಾಂಧಿ

ಭಾಷೆಗೆ ಸಂಬಂಧಿಸಿದ ಸಂವಿಧಾನ ಸಭೆಯ ಚರ್ಚೆಗಳು ವಿಭಜನಕಾರಿ ಹಾಗೂ ಕೋಮುವಾದದ ಸ್ವರೂಪ ಪಡೆದುಕೊಳ್ಳುವ ಅಂಚಿಗೆ ಹೋದಾಗಲೆಲ್ಲ ಗಾಂಧಿಯ ಆಧ್ಯಾತ್ಮಿಕ ಮಧ್ಯಸ್ಥಿಕೆಯು ಚರ್ಚೆಯನ್ನು ತಹಬದಿಗೆ ತರುತ್ತಿತ್ತು. ಉದಾಹರಣೆಗೆ, ಅಯ್ಯಂಗಾರ್ ಅವರ ತಿದ್ದುಪಡಿಯಲ್ಲಿ ೧೩ ಸ್ಥಳೀಯ ಭಾಷೆಗಳ ಪಟ್ಟಿಯಿತ್ತು. ಆ ಪಟ್ಟಿಯ ಮುಂಚಿನ ಪ್ಯಾರಾದಲ್ಲಿದ್ದ ಮಿಶ್ರ ಸಂಸ್ಕೃತಿ ಹಾಗೂ ಹಿಂದೂಸ್ಥಾನಿಯಲ್ಲಿ ಬಳಕೆಯಾಗುವ ಶೈಲಿ ಮತ್ತು ಅಭಿವ್ಯಕ್ತಿಯ ಉಲ್ಲೇಖವಿತ್ತು. ಅದಕ್ಕೆ ಪ್ರತಿಕ್ರಿಯಿಸುತ್ತಾ ಸೇಠ್ ಗೋವಿಂದ ದಾಸ್ ಅವರು ಹೀಗೆ ಹೇಳಿದ್ದಾರೆ:

"ಉರ್ದು ಭಾಷೆಯು ಹೆಚ್ಚಾಗಿ ದೇಶದ ಹೊರಗಿನಿಂದ ಸ್ಫೂರ್ತಿ ಪಡೆದುಕೊಂಡಿದೆ. ನಾವು ನಮ್ಮ ದೇಶವನ್ನು ಜಾತ್ಯತೀತ ರಾಷ್ಟ್ರವೆಂದು ಒಪ್ಪಿಕೊಂಡಿರುವುದು ನಿಜವೇ ಆಗಿದೆ. ಆದರೆ ಈ ಒಪ್ಪಿಗೆಯ ಮೂಲಕ ಬಹುರೂಪ ಸಂಸ್ಕೃತಿಗಳನ್ನೂ ಒಪ್ಪಿಕೊಳ್ಳಬೇಕಾಗಬಹುದೆಂದು ನಾವು ತಿಳಿದಿರಲಿಲ್ಲ. ಭಾರತವು ದೀರ್ಘಕಾಲಿಕ ಇತಿಹಾಸವಿರುವ ಪ್ರಾಚೀನ ದೇಶ. ಸಾವಿರಾರು ವರ್ಷಗಳ ಕಾಲ

ಒಂದೇ ಸಂಸ್ಕೃತಿಯು ಇಲ್ಲಿ ನೆಲೆಸಿದೆ. ಆ ಪರಂಪರೆ ಇನ್ನೂ ಮುರಿದಿಲ್ಲ. ಆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ನಮ್ಮ ಇಡೀ ದೇಶಕ್ಕೆ ಒಂದು ಭಾಷೆ ಹಾಗೂ ಒಂದು ಲಿಪಿಯ ಅಗತ್ಯವಿದೆ." (CAD, ೧೯೪೯, Vol. IX: ೧೩೨೮)

ಆಗ, ಅಯ್ಯಂಗಾರ್ ತಿದ್ದುಪಡಿಯನ್ನು ಸಮರ್ಥಿಸಲು ಸೇಠ್ ಗೋವಿಂದ ದಾಸ್ ಅವರಿಗೆ ಸೂಕ್ತ ಪ್ರತ್ಯುತ್ತರ ನೀಡುತ್ತಾ ನೆಹರು ಅವರು ಗಾಂಧಿಯ ಪರಂಪರೆಯನ್ನು (ಅವರ ಹೆಸರನ್ನು ಉಲ್ಲೇಖಿಸದೇ) ಅವಲಂಬಿಸಿದರು: 'ಉತ್ತರ ಭಾರತದಲ್ಲಿ ಅಭಿವೃದ್ಧಿಯಾದ ಮಿಶ್ರ ಸಂಸ್ಕೃತಿಯ'ನ್ನು ಪ್ರತಿನಿಧಿಸುವ ಭಾಷೆಯನ್ನು ಅಧಿಕೃತ ಭಾಷೆಯಾಗಿ ಅಳವಡಿಸಿಕೊಳ್ಳದಿದ್ದರೆ ಅದು 'ರಾಷ್ಟ್ರಪಿತ'ನಿಗೆ ದ್ರೋಹ ಬಗೆದಂತೆ ಎಂದು ಹೇಳಿದರು. (CAD, ೧೯೪೯, Vol. IX: ೧೪೧೧). 'ನಾವು ಇನ್ನೊಬ್ಬರನ್ನು ಎಷ್ಟಾದರೂ ಅನುಕರಿಸಬಹುದು. ಅವರು ಮಾಡಿದಂತೆಯೇ ಮಾಡಬಹುದು. ನಿಜ ಅರ್ಥದಲ್ಲಿ ಅದು ನಮ್ಮನ್ನು ಸುಸಂಸ್ಕೃತರನ್ನಾಗಿಸುವುದಿಲ್ಲ. ಏಕೆಂದರೆ ನಾವು ಅವರ ನಕಲು ಮಾತ್ರ ಆಗಿರುತ್ತೇವೆ. ಹೊಸ ಕಾಲಘಟ್ಟದ ಹೊಸ್ತಿಲಲ್ಲಿ ನಿಂತಿರುವಾಗ ಹಳೆಯದನ್ನೇ ನೆನಪು ಮಾಡಿಕೊಳ್ಳುವುದು ಉತ್ತಮ ಸಿದ್ಧತೆಯಾಗುವುದಿಲ್ಲ. ಭಾಷೆ ಇಂತಹ ಒಂದು ವಿಷಯ, ಆದರೆ ಇಂತಹ ಇನ್ನೂ ಅನೇಕ ವಿಷಯಗಳಿವೆ. (CAD, ೧೯೪೯, Vol. IX: ೧೪೧೨)

ಅಯ್ಯಂಗಾರ್ ಅವರ ರಾಜೀ ಸೂತ್ರವು ಅನೇಕ ತಿದ್ದುಪಡಿಗಳಿಗೆ ಆಹ್ವಾನ ನೀಡಿತು. ವಿಧಾನಸಭೆಗೆ ಸಲ್ಲಿಸಿದ ಅಯ್ಯಂಗಾರ್ ಅವರ ಪತ್ರಕ್ಕೆ ಸರಿಸುಮಾರು ೪೦೦ ತಿದ್ದುಪಡಿಗಳಾದವು. ಮೂಲಭೂತವಾಗಿ ನಾಲ್ಕು ಅಂಶಗಳು ಬದಲಾದವು. ಈ ಎಲ್ಲ ಬದಲಾವಣೆಗಳೂ ಮಹತ್ತ್ವದಾಗಿದ್ದವು. (ಜಾಫರ್ಲಾಟ್, ೨೦೦೪: ೧೪೩). ಇವು ಯಾವುವೆಂದರೆ: ಸಂವಿಧಾನ ಅಂಗೀಕಾರವಾದ ೧೫ ವರ್ಷಗಳ ಅನಂತರ ರಾಷ್ಟ್ರಪತಿಯವರು ಸಂಸ್ಕೃತ ಮೂಲದ ಸಂಖ್ಯೆಗಳನ್ನು ಅಧಿಕೃತವಾಗಿ ಅನುಮೋದಿಸಬೇಕು. ಪ್ರಾದೇಶಿಕ ನ್ಯಾಯಾಲಯಗಳಲ್ಲಿ ರಾಷ್ಟ್ರಪತಿಯವರ ಅನುಮತಿ ಪಡೆದ ಅನಂತರ ಹಿಂದಿಯನ್ನು ಬಳಸಬಹುದು; ಕಾನೂನು ಪತ್ರಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ ಪಕ್ಷದಲ್ಲಿ ಅವನ್ನು ಪ್ರಾದೇಶಿಕ ಭಾಷೆಗಳಲ್ಲಿಯೂ ಪ್ರಕಟಿಸಬಹುದು. ಅಧಿಕೃತವಾಗಿ ಗುರುತಿಸಿದ ೧೩ ಭಾಷೆಗಳ ಪಟ್ಟಿಯಲ್ಲಿ ಸಂಸ್ಕೃತವನ್ನು ಸೇರಿಸಲಾಗುವುದು.

ಈ ರೀತಿ ಇಂಗ್ಲಿಷ್ ಭಾಷೆಯು ಗಣ್ಯರ ಹಾಗೂ ರಾಜ್ಯಗಳ ನಡುವಿನ ಸಂಬಂಧದ ಭಾಷೆಯಾಗಿ ಉಳಿದುಕೊಂಡಿತು. ೧೯೬೫ರ ಗಡುವು ಸಮೀಪಿಸುತ್ತಿದ್ದುದರಿಂದ, ೧೯೬೩ನೇ ಇಸವಿಯಲ್ಲಿ ಸಂಸತ್ತು ಇದನ್ನು ಪರಿಶೀಲಿಸಿ,

ಅಧಿಕೃತ ಭಾಷಾ ಕಾಯಿದೆಯನ್ನು ಜಾರಿಗೆ ತಂದಿತು. ಹಾಗೂ ಈ ಕಾಯಿದೆಯ ಮುಖಾಂತರ ಇಂಗ್ಲಿಷ್ ಭಾಷೆಯು ಅಧಿಕೃತ ಸಹಾಯಕ ಭಾಷೆಯಾಯಿತು. ಅಂತಿಮವಾಗಿ, ೧೯೬೭ ನೇ ಇಸವಿಯ ತಿದ್ದುಪಡಿಯು, ಹಿಂದಿಯೇತರ ರಾಜ್ಯಗಳಿಂದ ಬದಲಾವಣೆಗೆ ಬೇಡಿಕೆ ಬರುವ ಸಮಯದವರೆಗೂ ಇಂಗ್ಲಿಷ್ ಭಾಷೆಯ ಬಳಕೆಯನ್ನು ಖಾತರಿಪಡಿಸಿತು ಹಾಗೂ ಆ ಮೂಲಕ ಹಿಂದಿಯೇತರ ರಾಜ್ಯಗಳ ಭಯವನ್ನು ದೂರಮಾಡಿತು. ಜೊತೆಗೆ, ಶಿಕ್ಷಣದಲ್ಲಿ ದೃಢ ಹಾಗೂ ಅನಿರ್ದಿಷ್ಟ ದ್ವಿಭಾಷಿಕ ನೀತಿಗೆ ಇದು ನಾಂದಿಯಾಯಿತು.

ಭಾಷಾ ವಿಷಯಗಳು ಮತ್ತು ಭಾರತದ ಸಂವಿಧಾನ: ಭಾಷಾ ನೀತಿ ಕುರಿತು ವಿಮರ್ಶಾತ್ಮಕ ಚಿಂತನೆ

'ರಾಷ್ಟ್ರೀಯ' ಮತ್ತು 'ಅಧಿಕೃತ' ಗಳನ್ನು ಬೇರ್ಪಡಿಸಿ, ಹಿಂದಿಯನ್ನು ದೇಶದ ಅಧಿಕೃತ ಭಾಷೆ ಎಂದು ಆಯ್ಕೆ ಮಾಡುವುದರ ಮೂಲಕ ಭಾರತದ ಸಂವಿಧಾನವು ಭಾಷಾ ವಿವಾದವನ್ನು ಪರಿಹರಿಸಿತು. ವಾಸ್ತವವಾಗಿ ಬಹುಭಾಷಿಕತೆಯು ದೇಶದ ಸಂಕೇತವಾಯಿತು. ಬಹುಭಾಷಿಕತೆಗೆ ದೊರೆತ ಪ್ರೋತ್ಸಾಹವು ಪಕ್ಷಪಾತ–ರಹಿತ ತತ್ತ್ವಗಳನ್ನು ಆಧರಿಸಿತ್ತು. ಭಾಷೆಯನ್ನು ಬಳಸುವವರು ಮತ್ತು ಭಾಷೆ ಇವೆರಡರ ಮೇಲೂ ಇದರ ಪರಿಣಾಮಗಳಿವೆ. ಮೊದಲನೆಯ ಅಂಶ, ಓರ್ವ ವ್ಯಕ್ತಿ ಯಾವುದೇ ಭಾಷಾ–ಆಧಾರಿತ ಪಕ್ಷಪಾತವಿಲ್ಲದೇ ತನ್ನ ಹಿತವನ್ನು ತಾನು ಕಾಯ್ದುಕೊಳ್ಳುವುದಕ್ಕೆ ಇದು ಸಮಾನ ಅವಕಾಶವನ್ನು ಕೊಡುತ್ತದೆ. ಹಾಗೂ, ಭಾಷೆಯಿಂದ ಉದ್ಭವವಾಗಬಹುದಾದ ಸಂಘರ್ಷವನ್ನು ಪರಿಹರಿಸುವ ಸಲುವಾಗಿ ಸಂವಿಧಾನವು ನಾಗರಿಕರ ಮೂಲಭೂತ ಹಕ್ಕುಗಳನ್ನು ಸ್ಥಾಪಿಸಿದೆ. (Articles 15(1) and 16 (1) & (2)). ಸಾಂವಿಧಾನಿಕ ಅನುಚ್ಛೇದಗಳಲ್ಲಿ ಪಕ್ಷಪಾತ ಯಾವ ರೀತಿಗಳಲ್ಲಿ ಆಗುವುದೆಂದು ಪರಿಗಣಿಸಲು "ಧರ್ಮ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಇವುಗಳಲ್ಲಿ ಯಾವುದೇ ಒಂದು" ಎನ್ನುವಂತಹ ಗುಣಲಕ್ಷಣಗಳನ್ನು (Annamalai, n.d.) ಉಲ್ಲೇಖಿಸಲಾಗಿದೆ. ಪಕ್ಷಪಾತದ ಈ ಪರಿಕಲ್ಪನೆಯೊಳಗೆ ಭಾಷೆ ತನ್ನ ಗುಣಲಕ್ಷಣವನ್ನು ಗಳಿಸಿಕೊಳ್ಳುತ್ತದೆ. (Annamalai, n.d.) ಅರ್ಥಾತ್, ಇದು ವಿಸ್ತರಣೆಯ ಮೂಲಕ ಮಾತ್ರ ಮಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಉದಾಹರಣೆಗೆ, ಭಾಷಾ ಕೌಶಲ ಅಗತ್ಯವಾಗಿರುವಾಗ ಆ ಭಾಷೆಯ ಪರಿಣತಿ ಇದ್ದಾಗ ಉದ್ಯೋಗದ ಸಮಾನಾವಕಾಶ ತತ್ತ್ವದ ಪಾಲನೆಯಾಗುತ್ತದೆ, ಭಾಷಾ ಕೌಶಲದ ಅಗತ್ಯವಿಲ್ಲದಿರುವ ಕಡೆ ಯಾವುದೇ ಪಕ್ಷಪಾತ ಇರುವುದಿಲ್ಲ.

ಅನುಚ್ಛೇದ ೨೯ (೨) ಸಹ ಸರ್ಕಾರಿ ಅಥವಾ ಸರ್ಕಾರದ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಎಲ್ಲ ಪ್ರಜೆಗಳಿಗೂ ವಿಶೇಷ ಹಕ್ಕನ್ನು ನೀಡುತ್ತದೆ. ಯಾವುದೇ ಒಂದು ಭಾಷೆಯನ್ನು ಮಾತನಾಡುವವರಿಗೆ, ಶೈಕ್ಷಣಿಕ ಪಠ್ಯಕ್ರಮಕ್ಕೆ ಅಗತ್ಯವಿರುವ ಭಾಷಾ ಕೌಶಲವಿಲ್ಲ ಎನ್ನುವ ಆಧಾರದ ಮೇಲೆ ಪ್ರವೇಶವನ್ನು ನಿರಾಕರಿಸುವಂತಿಲ್ಲ. ವಾಸ್ತವವಾಗಿ ಭಾರತದ ಶಿಕ್ಷಣ ನೀತಿಯು, ವಿದ್ಯಾರ್ಥಿ ತನ್ನ ೧೦ ವರ್ಷಗಳ ಶಾಲಾ ಶಿಕ್ಷಣದ ಅವಧಿಯೊಳಗೆ ಮೂರು ಭಾಷೆಗಳಲ್ಲಿ ವಿವಿಧ ಸ್ತರಗಳ ಕೌಶಲವನ್ನು ಗಳಿಸಿರಬೇಕೆಂದು ತಿಳಿಸುತ್ತದೆ.

ಇನ್ನೊಂದು ರೀತಿಯಲ್ಲಿ ಗಮನಿಸಿದರೆ, ಶಿಕ್ಷಣದಲ್ಲಿ ಭಾಷೆಯ ಬಳಕೆ, ಭಾಷಾ ಮಾಧ್ಯಮ, ಬೋಧಿತ ಭಾಷೆ ಇತ್ಯಾದಿ ಇವೆಲ್ಲವೂ ಭಾಷಾ ಪಕ್ಷಪಾತವಾಗಬಹುದು. ಸಂವಿಧಾನದ ೨೯ನೇ ಅನುಚ್ಛೇದವು "ಭಾರತ ಗಣರಾಜ್ಯದ ನಾಗರಿಕರ ಯಾವುದೇ ವಿಭಾಗವು ತನ್ನದೇ ಆದ ವಿಶಿಷ್ಟ ಭಾಷೆ, ಲಿಪಿ ಮತ್ತು ಸಂಸ್ಕೃತಿ" ಯನ್ನು ಸಂರಕ್ಷಿಸಿಕೊಳ್ಳುವ ಮೂಲಭೂತ ಹಕ್ಕನ್ನು ಪ್ರದಾನ ಮಾಡುವ ಮೂಲಕ ಈ ತೊಂದರೆಯನ್ನು ನಿವಾರಿಸುತ್ತದೆ (ಅನು, ೨೯ (೧)). ೨೯ (೧) ನೇ ಅನುಚ್ಛೇದಕ್ಕೆ ಯಾವುದೇ ನಿರ್ಬಂಧಗಳಿಲ್ಲ. ತಮ್ಮ ಭಾಷೆ, ಲಿಪಿ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಸಂಪೂರ್ಣ ಹಕ್ಕನ್ನು ಸಂವಿಧಾನವು ಪ್ರಜೆಗಳಿಗೆ ನೀಡಿದೆ. ಆದರೆ ಈ ಹಕ್ಕು ಪರಿಣಾಮಕಾರಿಯಾಗಲು ಸಬಲ ಸಂದರ್ಭ ಮತ್ತು ಬೌದ್ಧಿಕ ಸಂಪನ್ಮೂಲಗಳು ಶಿಕ್ಷಣದಲ್ಲಿ ದೊರೆಯುತ್ತವೆ. ಉದಾಹರಣೆಗೆ, ಶಿಕ್ಷಣದಲ್ಲಿ ಭಾಷೆ ನೀಡುವ ಸಂದರ್ಭವನ್ನು ಬಳಸಿಕೊಂಡು ಗುರು ನಾನಕ್ ವಿಶ್ವವಿದ್ಯಾನಿಲಯವು ಪಂಜಾಬೀ ಭಾಷೆ ಮತ್ತು ಸಾಹಿತ್ಯದ ಅಧ್ಯಯನ ಮತ್ತು ಸಂಶೋಧನೆ ಹಾಗೂ ಪಂಜಾಬೀ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಗೊಂಡಿತು.

ಭಾಷೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು, ಅವರ ಆಯ್ಕೆಯ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸುವ ಹಕ್ಕನ್ನು (ಅನು ೩೦(೧)) ಸಂವಿಧಾನವು ಅವರಿಗೆ ನೀಡಿದೆ. ಜೊತೆಗೆ ಈ ಸಂಸ್ಥೆಗಳನ್ನು ಭಾಷಾ ಅಥವಾ ಧಾರ್ಮಿಕ ಅಲ್ಪಸಂಖ್ಯಾತರು ನಿರ್ವಹಿಸುತ್ತಿದ್ದರೂ ಸಹ ಅನುದಾನ ನೀಡುವಲ್ಲಿ ಸರ್ಕಾರವು ಇವನ್ನು ಸಮಾನವಾಗಿ ಕಾಣಬೇಕೆನ್ನುವುದನ್ನು ಸಂವಿಧಾನವು ಕಡ್ಡಾಯಗೊಳಿಸಿದೆ. (ಅನು ೩೦(೨)). ಶಿಕ್ಷಣದಲ್ಲಿ ಇದನ್ನು ಜಾರಿಗೊಳಿಸುವುದರ ಮೂಲಕ ಶೈಕ್ಷಣಿಕ ಅವಕಾಶಗಳ ಪಕ್ಷಪಾತ, ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಸಂಭಾವ್ಯ ಪಕ್ಷಪಾತವನ್ನು ಸಂವಿಧಾನವು ಕನಿಷ್ಠಗೊಳಿಸಿದೆ.

ಅನುಚ್ಛೇದ ೨೯ "ಭಾರತ ರಾಜ್ಯಕ್ಷೇತ್ರದ ಯಾವುದೇ ನಾಗರಿಕ ವಿಭಾಗ"ವನ್ನು ತನ್ನ ವ್ಯಾಪ್ತಿಯಡಿಯಲ್ಲಿ ತರುತ್ತದೆ. ಆದರೆ ಅನುಚ್ಛೇದ ೩೦ ಭಾಷಾ ಅಥವಾ ಧಾರ್ಮಿಕ ಅಲ್ಪಸಂಖ್ಯಾತರನ್ನು ಮಾತ್ರ ತನ್ನ ಕಾರ್ಯವ್ಯಾಪ್ತಿಯೊಳಗೆ ತರುತ್ತದೆ. "ಪ್ರತಿಯೊಂದು ಘಟಕದಲ್ಲಿ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಅವರ ಭಾಷೆ, ಲಿಪಿ ಮತ್ತು ಸಂಸ್ಕೃತಿ ರಕ್ಷಣೆಯಾಗಬೇಕು ಹಾಗೂ ಇವುಗಳಿಗೆ ಸಂಬಂಧಿಸಿದಂತೆ ದಮನಕಾರೀ ಅಥವಾ ಪಕ್ಷಪಾತವಾಗುವ ಯಾವುದೇ ಕಾನೂನು ಅಥವಾ ನಿಯಮಗಳನ್ನು ಜಾರಿಗೊಳಿಸುವಂತಿಲ್ಲ" ಎಂದು ಏಪ್ರಿಲ್ ೧೯೪೭ ರಲ್ಲಿ ಸಭೆಯು ಉಲ್ಲೇಖಿಸಿತ್ತು (CAD, ೧೯೮೯, Vol. VII: ೮೯೩). ಹಾಗೂ ಸಂವಿಧಾನ ಕರಡು ಸಮಿತಿಯು ಈ ಮಹತ್ತ್ವದ ಅನುಚ್ಛೇದವನ್ನು ಈ ರೀತಿಯಾಗಿ ಬರೆದಿತ್ತು, "ಭಾರತ ಗಣರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸವಾಗಿರುವ ನಾಗರಿಕರ ಯಾವುದೇ ವಿಭಾಗವು ತನ್ನದೇ ಆದ ಯಾವುದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಆ ವಿಭಾಗವು ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು (ಅದೇ)." ಇದು ಭಾಷಾ ಹಕ್ಕನ್ನು ಸ್ಥಾಪಿಸುವುದರಿಂದ ಭಾರತದ ನಾಗರಿಕರ ಯಾವುದೇ ವಿಭಾಗಕ್ಕೆ ತಮ್ಮ ಭಾಷೆಯನ್ನು ಸಂರಕ್ಷಿಸಿಕೊಳ್ಳುವ ಅಧಿಕಾರವಿರಬೇಕು ಎಂದು ಸಂವಿಧಾನ ರಚನಾ ಸಭೆಯ ಸದಸ್ಯರು ನಂಬಿದ್ದರು. ಇದನ್ನು ಒಂದು ಸಮೂಹದ ಹಕ್ಕು ಎಂದು ಗ್ರಹಿಸಬಾರದು. (CAD, ೧೯೮೯, Vol. IX: ೧೪೧೨)

ಅನುಚ್ಛೇದ ೨೯ (೧) ಹಾಗೂ ಅನುಚ್ಛೇದ ೩೦ (೧) ಇವೆರಡೂ ಒಟ್ಟಾಗಿ ಅಲ್ಪಸಂಖ್ಯಾತರಿಗೆ (ಅಥವಾ ಭಾರತದ ನಾಗರಿಕರ ಯಾವುದೇ ವಿಭಾಗಕ್ಕೆ) ಬೋಧನಾ ಮಾಧ್ಯಮದ ಆಯ್ಕೆ ನೀಡುತ್ತವೆ ಹಾಗೂ ಅಲ್ಪಸಂಖ್ಯಾತರ ಹಕ್ಕು ಪರಿಣಾಮಕಾರಿಯಾಗಿರುವುದನ್ನು ಖಚಿತಪಡಿಸಿಕೊಳ್ಳತ್ತಾ, ಬೋಧನಾ ಮಾಧ್ಯಮವನ್ನು ಆಯ್ಕೆ ಮಾಡಿ ನಿರ್ಧಾರ ಮಾಡುವ ಅಧಿಕಾರವನ್ನು ರಾಜ್ಯಕ್ಕೆ ನೀಡುತ್ತವೆ. ಉದಾಹರಣೆಗೆ, ಪಂಜಾಬಿ ವಿಶ್ವವಿದ್ಯಾನಿಲಯದ ಪ್ರಕರಣದಲ್ಲಿ ಏನಾಯಿತೆಂದರೆ ಪಂಜಾಬಿ ವಿಶ್ವವಿದ್ಯಾನಿಲಯವು ಒಂದು ಅಧಿಸೂಚನೆಯ ಮುಖಾಂತರ ಕೆಲವು ಕಾಲೇಜುಗಳನ್ನು ಕಡ್ಡಾಯವಾಗಿ ಅಂಗಸಂಸ್ಥೆಗಳೆಂದು ಸ್ವೀಕರಿಸಿತು. ಈ ಕಾಲೇಜುಗಳಿಗೆ ಗುರುಮುಖಿ ಲಿಪಿಯಲ್ಲಿನ ಪಂಜಾಬಿ ಭಾಷೆಯೊಂದೇ ಭಾಷಾ ಮಾಧ್ಯಮ ಮತ್ತು ಪರೀಕ್ಷಾ ಮಾಧ್ಯಮವಾಗಿರಬೇಕೆಂದು ಆದೇಶ ನೀಡಿತು. ಆಗ ಪಂಜಾಬಿ ವಿಶ್ವವಿದ್ಯಾನಿಲಯ ಕಡ್ಡಾಯವಾಗಿ ಸಂಯೋಜಿಸಿಕೊಂಡಿರುವ ಆರ್ಯಸಮಾಜಗಳು ನಡೆಸುತ್ತಿರುವ ಕಾಲೇಜುಗಳಲ್ಲಿ ಅವರ ಲಿಪಿಯನ್ನು ಬಳಸಲು ಇರುವ ಹಕ್ಕನ್ನು

ಪಂಜಾಬಿ ವಿಶ್ವವಿದ್ಯಾನಿಲಯದ ಅಧಿಸೂಚನೆಯು ಉಲ್ಲಂಘಿಸಿದೆ ಎಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸಿತು.

ಅದೇ ರೀತಿ ಗುಜರಾತ್ ವಿಶ್ವವಿದ್ಯಾನಿಲಯವು ಮಾಡಿದ ತನ್ನ ಸಂಯೋಜಿತ ಕಾಲೇಜುಗಳಲ್ಲಿ ಗುಜರಾತಿ ಅಥವಾ ಹಿಂದಿ ಭಾಷೆ ಮಾತ್ರ ಬೋಧನಾ ಹಾಗೂ ಪರೀಕ್ಷಾ ಮಾಧ್ಯಮವಾಗಿರಬೇಕೆನ್ನುವ ನಿಯಮದಿಂದ ಇಂಗ್ಲಿಷ್ ಮಾತೃಭಾಷೆಯಾಗಿರುವ ಆಂಗ್ಲೋ ಇಂಡಿಯನ್ನರ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿತು.

ಸಾಂವಿಧಾನಿಕ ಅನುಚ್ಛೇದ ೩೫೦ ಎಲ್ಲ ಅಲ್ಪಸಂಖ್ಯಾತರನ್ನು ಒಳಗೊಳ್ಳುವ ಮೂಲಕ ಭಾರತದ ಭಾಷಾ ನೀತಿಗೆ ಅಡಿಪಾಯವನ್ನು ಹಾಕುತ್ತದೆ. ಈ ಅನುಚ್ಛೇದದ ಅನುಸಾರ, "ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಕುಂದುಕೊರತೆಯ ನಿವಾರಣೆಗಾಗಿ ಒಕ್ಕೂಟದ ಅಥವಾ ಒಂದು ರಾಜ್ಯದ ಯಾರೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಒಕ್ಕೂಟದಲ್ಲಿ ಅಥವಾ ಸಂದರ್ಭಾನುಸಾರ ಆ ರಾಜ್ಯದಲ್ಲಿ ಬಳಸುವ ಭಾಷೆಗಳ ಪೈಕಿ ಯಾವುದೇ ಭಾಷೆಯಲ್ಲಿ ಮನವಿಯನ್ನು ಸಲ್ಲಿಸುವುದಕ್ಕೆ" ಅವಕಾಶವಿರುತ್ತದೆ. ಜೊತೆಗೆ, ಅನುಚ್ಛೇದ ೩೫೦ ಎ "ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು ಭಾಷಾ ಅಲ್ಪಸಂಖ್ಯಾತ ವರ್ಗಗಳ ಮಕ್ಕಳಿಗೆ ಸಿಗಲು ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವು ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸೌಲಭ್ಯಗಳನ್ನು ಒದಗಿಸುವುದನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು," ಎನ್ನುವ ಷರತ್ತು ಹಾಕಿ ಜವಾಬ್ದಾರಿಯನ್ನು ರಾಜ್ಯಗಳಿಗೆ ಹೊರಿಸಿದೆ. ಅನುಚ್ಛೇದ ೩೫೦ ಬಿ "ಭಾಷಾ ಅಲ್ಪಸಂಖ್ಯಾತರಿಗಾಗಿ ರಾಷ್ಟ್ರಪತಿಯು ನೇಮಕಮಾಡುವ ಒಬ್ಬ ವಿಶೇಷ ಅಧಿಕಾರಿ ಇರತಕ್ಕದ್ದು ಹಾಗೂ ಅಲ್ಪಸಂಖ್ಯಾತರಿಗಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತನಿಖೆ ಮಾಡುವುದು ವಿಶೇಷ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ರಾಷ್ಟ್ರಪತಿಯು ನಿರ್ದೇಶಿಸಬಹುದಾದಂಥ ಅವಧಿಯ ಅಂತರಗಳಲ್ಲಿ ಆ ವಿಷಯಗಳ ಬಗ್ಗೆ ರಾಷ್ಟ್ರಪತಿಗೆ ವರದಿ ಮಾಡುವುದು ಹಾಗೂ ರಾಷ್ಟ್ರಪತಿಯು ಅಂಥ ಎಲ್ಲ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮತ್ತು ಸಂಬಂಧಪಟ್ಟ ರಾಜ್ಯಸರ್ಕಾರಗಳಿಗೆ ಅವುಗಳನ್ನು ಕಳುಹಿಸಿಕೊಡುವಂತೆ ಮಾಡತಕ್ಕದ್ದು" ಎಂದೂ ಸಹ ಸೂಚಿಸಿದೆ. ಆದರೆ ತಿದ್ದುಪಡಿಗಳಾಗಿ ಬಂದ ೩೫೦ಎ ಮತ್ತು ೩೫೦ಬಿ

ಗಳಿಂದ ಅನುಚ್ಛೇದ ೩೫೦ ಅಲ್ಪಸಂಖ್ಯಾತರಿಗೆ ನಿರರ್ಥಕವಾಯಿತು. ಇವು ವಿಶೇಷ ನಿರ್ದೇಶಕ ತತ್ತ್ವಗಳಾದವೇ ಹೊರತು ಮೂಲಭೂತ ಹಕ್ಕಾಗಲಿಲ್ಲ. ಆದ್ದರಿಂದ ರಾಜ್ಯವು ಭಾಷಾ ಅಲ್ಪಸಂಖ್ಯಾತರಿಗಿರುವ ಸೌಲಭ್ಯಗಳನ್ನು ಕೊಡಲು ಯಾವುದೇ ವಿಶೇಷ ಪ್ರಯತ್ನಗಳನ್ನು ಮಾಡುವುದಿಲ್ಲ ಹಾಗೂ ಅದರ ವೈಫಲ್ಯಗಳು ಜಾಗರೂಕ ಪರಿಶೀಲನೆಯ ಸಲುವಾಗಿ ನ್ಯಾಯಲಯದ ಮುಂದೆಯೂ ಬರುವುದಿಲ್ಲ. ಈ ಅನುಚ್ಛೇದದ ಉಲ್ಲಂಘನೆಯಾದಾಗ ನ್ಯಾಯಾಲಯದ ಹಸ್ತಕ್ಷೇಪವನ್ನು ಕೇಳಲು ಭಾರತ ಸರ್ಕಾರ ರಚಿಸಿದ ಅಲ್ಪಸಂಖ್ಯಾತ ಆಯೋಗದ ವಿಶೇಷ ಅಧಿಕಾರಿಗೆ ಸಹ ಯಾವುದೇ ಕಾನೂನುಬದ್ಧ ಅಧಿಕಾರವೂ ಇಲ್ಲ.

ಭಾಷಾ ವಿಷಯ ಮತ್ತು ಪರಿಮಿತಗೊಳಿಸಲಾದ ಬಹುಭಾಷಿಕತೆಯ ನೀತಿ

ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ತೀವ್ರವಾದಿಗಳು ಮತ್ತು ಸೌಮ್ಯವಾದಿಗಳ ನಡುವೆ ಏರ್ಪಟ್ಟಿದ್ದ 'ಸಮ್ಮಿಶ್ರ ಸಂಸ್ಕೃತಿ'ಯ ಕಲ್ಪನೆಯಾಗಿದ್ದ ರಾಜೀಸೂತ್ರವನ್ನು 'ಬಹುಸಾಂಸ್ಕೃತಿಕತೆ' ಎಂದು ಭಾವಿಸಲಾಗಿತ್ತು. ಆದಾಗ್ಯೂ, ಇವರು ಪದಾರ್ಥಸಾರಭಾವದ (essentialist) ನಿಲುವನ್ನು ತೆಗೆದುಕೊಂಡು ಸಂಸ್ಕೃತಿಯು ಬಿಗಿ ಹಾಗೂ ಸ್ಥಿರವಾದದ್ದೆಂದು ಪರಿಗಣಿಸಿದ್ದರು. ಭಾಷಾ ನೀತಿಯು ಇವೇ ಸೈದ್ಧಾಂತಿಕ ಪ್ರವೃತ್ತಿಗಳನ್ನು ಪ್ರತಿಫಲಿಸುತ್ತಾ ಬಹುಭಾಷಿಕತೆಯ ಮಹತ್ತ್ವವನ್ನು ಕಡೆಗಣಿಸಿತು. ಬಿಗಿಯಾದ ಹಾಗೂ ಸ್ಥಿರವಾದ 'ಒಂದು ಭಾಷೆ' ಇದೆ ಎನ್ನುವ ಪೂರ್ವಗ್ರಹದ ಹಿನ್ನೆಲೆಯಲ್ಲಿ 'ವೈವಿಧ್ಯದಲ್ಲಿ ಏಕತೆ' ಎನ್ನುವ ಘೋಷಣೆಯಲ್ಲಿ ಇದೂ ಸಹ ಧ್ವನಿಗೂಡಿಸಿತು. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು ೧೯೫೭ ರಲ್ಲಿ 'ತ್ರಿ-ಭಾಷಾ ಸೂತ್ರ'ವನ್ನು ಶಿಫಾರಸು ಮಾಡಿತು ಹಾಗೂ ೧೯೬೧ ರ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಇದು ಅಂಗೀಕೃತವಾಯಿತು. ಹಿಂದಿ ಮತ್ತು ಹಿಂದಿಯೇತರ ಪ್ರದೇಶಗಳಲ್ಲಿ ಭಾಷಾ ಅಧ್ಯಯನಕ್ಕೆ ಸಮಾನ ಅವಕಾಶಗಳನ್ನು ಕಲ್ಪಿಸಿ, ಜೊತೆಗೆ ಆಧುನಿಕ ದೃಷ್ಟಿಕೋನವನ್ನು (ಇಂಗ್ಲಿಷ್ ಮೂಲಕ) ಸೃಷ್ಟಿಸುವುದು ಇದರ ಉದ್ದೇಶವಾಗಿತ್ತು. 'ಭಾಷೆ' ಇದೆ ಎನ್ನುವ ನಂಬಿಕೆಯಿಂದ ಇದೊಂದು ರಾಜೀ ಸೂತ್ರವಾಗಿ ಹೊರಹೊಮ್ಮಿತ್ತು.

ನಮ್ಮ ಭಾಷಾ ನೀತಿಗೆ ಅನೇಕ ಸಂಗತಿಗಳು ಕಣ್ಣಿಗೆ ಕಾಣಲೇ ಇಲ್ಲ – ಒಂದು ಭಾಷೆ ಇನ್ನೊಂದು ಭಾಷೆಯ ಜೊತೆಗೂಡಿದಾಗ ಬಹುಭಾಷಿಕತೆಯಾಗುವುದಿಲ್ಲ; ಭಾಷಾ ವರ್ತನೆಗಳಲ್ಲಿ ವೈವಿಧ್ಯ ಇದ್ದರೆ ಅದು ಸಂವಹನವನ್ನು ಸುಗಮಗೊಳಿಸುತ್ತದೆಯೇ ಹೊರತು ಅಡಚಣೆಯಾಗುವುದಿಲ್ಲ; ನಮ್ಮ ಭಾಷಿಕ

ಸಂಪತ್ತಿನ ಲಕ್ಷಣಗಳು ನಿಯಮಬದ್ಧ ಮತ್ತು ಏಕರೂಪತೆಯಾಗಿರದೆ ಇದರ ಲಕ್ಷಣಗಳು ಕಾಣುವುದು ಹರಿವು ಮತ್ತು ಬಹುರೂಪತೆಯಲ್ಲಿ; ಹಾಗೂ ಶಿಕ್ಷಣಶಾಸ್ತ್ರವು ಬಹುಭಾಷಿಕತೆಯಲ್ಲಿ ಬೇರೂರಿದ್ದಾಗ ಮಾತ್ರ ಪರಿಕಲ್ಪನಾತ್ಮಕ ಸ್ಪಷ್ಟತೆ, ಪರಿಣತಿಯ ಮಟ್ಟ, ಅಧ್ಯಯನದಲ್ಲಿನ ಸಾಧನೆ ಮತ್ತು ಅರಿವಿನ ನಮ್ಯತೆ ಸಿದ್ಧಿಸುವುದು. ತರಗತಿಯಲ್ಲಿ ಲಭ್ಯವಿರುವ ಬಹುಭಾಷಿಕತೆಯನ್ನು ಸಂಪನ್ಮೂಲವಾಗಿ ಬಳಸಬಹುದು ಹಾಗೂ ಅದನ್ನೇ ಬೋಧನೆಯ ಗುರಿಯನ್ನಾಗಿಸಬಹುದು. ಮಾತೃಭಾಷಾ ಬಳಕೆಗೆ ಶೈಕ್ಷಣಿಕ ಮಹತ್ತ್ವವಿದೆ. ಕಲಿಯುವಾಗ ಭಾವಾತ್ಮಕ (affective) ಪರದೆ ತೆಳುವಾಗಿದ್ದಷ್ಟೂ ಹೊಸ ಭಾಷಾ ಗಳಿಕೆಯ ಸಾಫಲ್ಯ ಹೆಚ್ಚು ಎನ್ನುವುದು ಕ್ರಶನ್ (೧೯೮೨) ಅವರ ಒಂದು ಮಹತ್ತ್ವದ ಪ್ರತಿಪಾದನೆ. ಒಬ್ಬ ವಿದ್ಯಾರ್ಥಿಗೆ ತನ್ನ ಮಾತೃಭಾಷೆ ಬಳಸಲು ಅವಕಾಶವಿತ್ತರೆ, ಇತರ ವಿದ್ಯಾರ್ಥಿಗಳು ಭಾಷಾ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾರೆ ಹಾಗೂ ಇದು ಭಾಷಾ ರಚನೆಯನ್ನು ಕುರಿತ ಪ್ರಜ್ಞೆಯನ್ನು ಜಾಗೃತಗೊಳಿಸಬಹುದು, ಜೊತೆಗೆ ಭಾಷಾ ಸ್ವರೂಪವನ್ನು ಕುರಿತ ಅರಿವನ್ನು ಬೆಳೆಸುವ ಸಾಧ್ಯತೆ ಇರುತ್ತದೆ. ಈ ಅರಿವು ಬೇರೆ ಭಾಷೆಗಳನ್ನು ಕಲಿಯಲು ಸಹಾಯಕವಾಗುತ್ತದೆ. ಭಾಷೆಯನ್ನು ಕುರಿತ ಅರಿವಿನ ಮತ್ತೊಂದು ಮಹತ್ತ್ವದ ಪ್ರಯೋಜನವೇನೆಂದರೆ ಇದು ಉನ್ನತ ಸ್ತರದ ಚಿಂತನೆ ಮತ್ತು ಓದಿನ ಗ್ರಹಿಕೆಯನ್ನು ಹೆಚ್ಚಿಸುತ್ತದೆ.

ಸಂವಿಧಾನ ರಚನಾ ಸಭೆಯ ಸದಸ್ಯರನ್ನು ಕೃತಜ್ಞತೆಯಿಂದ ಸ್ಮರಿಸಿ ಅವರ "ಸಂವಿಧಾನ ರಚನಾ ಸಭೆಯ ಚರ್ಚೆಗಳನ್ನು ಆಧರಿಸಿದ ನೀತಿಗಳು ಮತ್ತು ಸಲಹೆಗಳಿಂದ ಅಭಿವೃದ್ಧಿಯಾದ ಅಗತ್ಯಗಳನ್ನು(ಅಗ್ನಿಹೋತ್ರಿ, ೨೦೦೭:೨೦೦)" ಅರ್ಥಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಭಾಷಾ ನೀತಿಯ ಸಿದ್ಧಮಾದರಿಗಳ ಪಲ್ಲಟಗಳಾಗುತ್ತಿವೆ. ಬಹುಭಾಷಿಕತೆ ಮತ್ತು ಶಿಕ್ಷಣದಲ್ಲಿ ಆಗಿರುವ ಇತ್ತೀಚಿನ ಕೆಲಸಗಳು, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) ೨೦೦೫ ಮತ್ತು ಭಾರತೀಯ ಭಾಷಾ ಬೋಧನೆಯ ಕುರಿತಾದ ನಿಲುಮೆ ಪತ್ರಿಕೆ ಈಗಾಗುತ್ತಿರುವ ಬದಲಾವಣೆಗಳನ್ನು ಸೂಚಿಸುತ್ತಿವೆ.

* * *

ಪರಾಮರ್ಶನೆಗಳು:

1. Agnihotri, R K (2007). Identity and Multilinguality: The case of India. In Language Policy, Culture,and Identity in Asian Contexts, edited by Amy B M Tsui and James W Tollefson. London:Lawrence Erlbaum Associates.

2. Annamalai, E (n.d.) Language in Political Economy and Market Economy: A case study of India.
3. Austin, G (1966). The Indian Constitution:Cornerstone of a Nation. Oxford: Clarendon Press.
4. Constituent Assembly Debates. (1946-1950). New Delhi: Indian National Archives.
5. Jaffrelot, C (2004). Composite Culture is not Multiculturalism: A Study of the Indian Constituent Assembly Debates. In India and the Politics of Developing Countries: Essays in Memory of Myron Weiner, edited by Ashutosh Varshney. New Delhi: Sage Publications.
6. Jain, MP (2008). Indian Constitution Law. New Delhi: Wadhwa & Company Law Publishers.

* * *

ಚಿಂತನಾತ್ಮಕ ಪ್ರಶ್ನೆಗಳು:

೧. ನಮ್ಮ ಸಂವಿಧಾನ ರಚನಾ ಸಭೆಯ ಭಾಷಾ ಚರ್ಚೆಗಳನ್ನು ಕುರಿತು ನಿಮ್ಮ ಅನಿಸಿಕೆಗಳೇನು?

೨. ನಮ್ಮ ಸಂವಿಧಾನವು ತ್ರಿಭಾಷಾ ನೀತಿಯನ್ನು ಅನುಸರಿಸಲು ಕಾರಣಗಳೇನು?

೩. ಬಹುಭಾಷಿಕ ಭಾರತದಲ್ಲಿ ಪ್ರತಿಯೊಂದು ಮಗುವಿಗೂ ಅದರ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಸಿಗಬೇಕು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

೪. ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಸಿಕ್ಕರೆ ಅವರ ಸರ್ವತೋಮುಖ ಏಳಿಗೆ ಸಾಧ್ಯವಾಗುತ್ತದೆಯೇ? ನಿಮ್ಮ ಅನುಭವದೊಂದಿಗೆ ಹೋಲಿಸಿನೋಡಿ.

ಇಮ್ತಿಯಾಝ್ ಹಸ್ನೈನ್: ಸಮಾಜೋ ಭಾಷಾವಿಜ್ಞಾನದ ಪ್ರಾಧ್ಯಾಪಕರು, ಆಲಿಘಡ್ ವಿಶ್ವವಿದ್ಯಾಲಯ, ಜವಾಹರಲಾಲ್ ವಿಶ್ವವಿದ್ಯಾಲಯದಿಂದ ಭಾಷಾವಿಜ್ಞಾನದಲ್ಲಿ ಪಿಎಚ್.ಡಿ., ಪದವಿ ಪಡೆದಿದ್ದಾರೆ. ಯು.ಎಸ್.ಎ.ದ ಹವಾಯ್ಲಿ, ಈಸ್ಟ್ ವೆಸ್ಟ ನಲ್ಲಿ ಫುಲ್ ಬ್ರೈಟ್ ಸ್ಕಾಲರ್‌ಶಿಪ್ ಪಡೆದಿದ್ದರು. ಪ್ರಸ್ತುತ ಭಾರತೀಯ ಭಾಷಾವಿಜ್ಞಾನ ಪತ್ರಿಕೆಯ ಸಂಪಾದಕರಾಗಿದ್ದಾರೆ.imtiaz.hasnain@gmail.com

ಅನುವಾದ: ಬೃಂದಾ ರಾವ್ / **ಪರಿಶೀಲನೆ**: ಮಂಜುನಾಥ ಹೆಗಡೆ

ಮೂಲ: *Language and Language Teaching*, Volume 1 Number 2 Issue 4 July 2013.

❑